# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5015/2022 ಫ್ರಾಸಾ-05
ಚಾಸಾ-05

ದಿನಾಂಕಃ 16-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಪುಟ್ಟಮ್ಮ |
| **ತಂದೆಯ / ಗಂಡನ ಹೆಸರು** | ದೊಡ್ಡತಿಮ್ಮಣ್ಣ |
| **ವಯಸ್ಸು** | 53 |
| **ಉದ್ಯೋಗ** | ವ್ಯವಸಾಯ |
| **ವಾಸಸ್ಥಳ** | ಬಂಡಿಪಾಳ್ಯ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಮೃತ ರಮೇಶ , ಆರೋಪಿ ರಾಮಯ್ಯ ನನಗೆ ಗೊತ್ತು. 3 ವರ್ಷಗಳ ಹಿಂದೆ ಮಧ್ಯಾಹನ 3-30 ಗಂಟೆಗೆ ನಾನು ನಮ್ಮ ಮನೆಯ ಮುಂಭಾಗದಲ್ಲಿ ಹೂ ಕಟ್ಟುತ್ತಿದ್ದಾಗ ಹನುಮಂತರಾಯಪ್ಪ ರವರ ಮನೆ ಹಿಂಭಾಗದಲ್ಲಿ ಜಗಳ ಮಾಡುತ್ತಿದ್ದರು. ಜಗಳವಾಡುವ ಶಬ್ದ ಕೇಳಿ ನಾನು ಅಲ್ಲಿಗೆ ಹೋಗಿ ನೋಡಿದಾಗ ಮೃತ ರಮೇಶ ಮತ್ತು ಆರೋಪಿ ಜಗಳವಾಡುತ್ತಿದ್ದರು. ರಾಮಯ್ಯನ ಅಣ್ಣನ ಮಗಳ ಮದುವೆ ವಿಚಾರಕ್ಕೆ ಜಗಳವಾಡುತ್ತಿದ್ದರು. ಆರೋಪಿ ದೊಣ್ಣೆ ತೆಗೆದುಕೊಂಡು ಮೃತ ರಮೇಶನ ತಲೆಯ ಹಿಂಭಾಗಕ್ಕೆ ಹೊಡೆದ ಆಗ ರಮೇಶ ಅಲ್ಲಿಯೇ ಕುಸಿದು ಬಿದ್ದ, ನಾನು ಹೋಗಿ ನೀರು ಕುಡಿಸಿದೆ. ಆಗ ರಮೇಶನ ಮಗ ಲಕ್ಷ್ಮೀಕಾಂತ, ನಾಗರಾಜು , ಮಂಜಮ್ಮ ರವರು ಹಾಜರಿದ್ದರು, ನಂತರ ರಮೇಶನನ್ನು ಅವರ ಮಗ ಲಕ್ಷ್ಮೀಕಾಂತ ಮನೆಗೆ ಕರೆದುಕೊಂಡು ಹೋಗಿರುತ್ತಾನೆ. ರಮೇಶನಿಗೆ ತಲೆ ಹಿಂಭಾಗದಲ್ಲಿ ಬಲಕಣ್ಣಿನ ಹುಬ್ಬಿನ ಮೇಲೆ ಗಾಯವಾಗಿತ್ತು. ನಂತರ ರಮೇಶನನ್ನು ಕಾರಿನಲ್ಲಿ ತುಮಕೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

ಘಟನೆ ನಡೆದ 4 ದಿನಗಳ ನಂತರ ರಮೇಶ ತೀರಿಕೊಂಡಿರುತ್ತಾನೆಂದು ಗೊತ್ತಾಗಿರುತ್ತದೆ. ನ್ಯಾಯಾಲಯದ ಮುಂದೆ ಇರುವ ಮು.ಮಾ-1 ದೂಣ್ಣೆಯನ್ನು ನೋಡಿ ಗುರುತಿಸಿ ಸದರಿ ದೊಣ್ಣೆಯಿಂದಲೇ ಆರೋಪಿ ರಮೇಶನಿಗೆ ಹೊಡೆದಿರುತ್ತಾನೆ. ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ. ರಮೇಶನ ಸಾವಿಗೆ ಆರೋಪಿಯೇ ಕಾರಣ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

**<u>ಪಾಟೀಸವಾಲು ಶ್ರೀ. ವಿ.ಆರ್.ಆರ್. ವಕೀಲರಿಂದ ಆರೋಪಿ ಪರವಾಗಿಃ-</u>**

ಮೃತ ರಮೇಶನ ತಾಯಿ ಚಾಸಾ-4 ಪುಟ್ಟತಾಯಮ್ಮ ನನಗೆ ಅಕ್ಕನಾಗಬೇಕು. ನಾನು ಒಬ್ಬಳೇ ನಮ್ಮ ಮನೆಯ ಹತ್ತಿರ ಹೂ ಕಟ್ಟುತ್ತಿದ್ದೆ. ನಮ್ಮ ಮನೆಯಿಂದ ಘಟನೆಯಾದ ಸ್ಥಳಕ್ಕೆ ಎಷ್ಟು ಅಂತರ ಇದೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಘಟನೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಘಟನೆಯಾದ ಸ್ಥಳದಲ್ಲಿ ನಾಗರಾಜು , ಪುಟ್ಟಮ್ಮ , ಶ್ವೇತಾ , ಲಕ್ಷ್ಮೀಕಾಂತ ಇದ್ದರು. ಸದರಿಯವರನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ಘಟನೆ ಜಾಗ ಊರಿನ ಮಧ್ಯೆ ಇರುತ್ತದೆ. ಸುತ್ತಲೂ ಮನೆಗಳು ಇರುತ್ತವೆ. ಸದರಿ ಜಾಗದ ಹತ್ತಿರ ಪೆಟ್ಟಿಗೆ ಅಂಗಡಿ ಇರುವುದಿಲ್ಲ. ನಾನು ಆ ದಿನ ಹೂ ಕಟ್ಟುತ್ತಿರಲಿಲ್ಲ ಮತ್ತು ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೋದ ನಂತರ ಘಟನೆ ನಡೆದಿರುತ್ತದೆ. ಮೃತ ರಮೇಶ ಮೂಲತಃ ತಿಪ್ಪನಹಳ್ಳಿಯವರು. ರಮೇಶನ ತಾಯಿ ಮತ್ತು ಆರೋಪಿಯ ತಾಯಿ ಅಕ್ಕ ತಂಗಿಯರು. ತಿಪ್ಪನಹಳ್ಳಿ ಗ್ರಾಮದಿಂದ ರಮೇಶನನ್ನು ಮತ್ತು ಆತನ ತಾಯಿಯನ್ನು ಆರೋಪಿ ತಾಯಿ ಕರೆದುಕೊಂಡು ಬಂದು ಬಂಡಿಪಾಳ್ಯದಲ್ಲಿ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ಆರೋಪಿ ತಾಯಿ ಮತ್ತು ಆತನ ಅಣ್ಣಂದಿರು ಮೃತ ರಮೇಶ ಮತ್ತು ಅವನ ತಾಯಿಯನ್ನು ತಿಪ್ಪನಹಳ್ಳಿಯಿಂದ ಬಂಡಿಪಾಳ್ಯಕ್ಕೆ ಕರೆದುಕೊಂಡು ಬಂದು ಜಾಗ ಕೊಡಿಸಿ, ಮನೆ ಕಟ್ಟಿಸಿ ಮತ್ತು ಅವನಿಗೆ ಮೃತ ರಮೇಶನಿಗೆ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-4 ಮತ್ತು ನಾನು ಅಕ್ಕ ತಂಗಿಯರು. ರಮೇಶನಿಗೆ ಮೂರ್ಛೆ ರೋಗ ಕಾಯಿಲೆ ಇತ್ತು ಎಂದರೆ ಸರಿಯಲ್ಲ. ರಮೇಶ ಮೂರ್ಛೆ ರೋಗ ಕಾಯಿಲೆಗೆ ನಿಮಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದ ಎಂದರೆ ಸುಳ್ಳು. ಘಟನೆಯಾಗಿದೆ ಎಂದು

ಹೇಳುವ ದಿನವೂ ರಮೇಶ ಮೂರ್ಛೆ ಹೋಗಿ ಬಿದಿದ್ದ ನಾವು ಮತ್ತು ಆರೋಪಿ ರಾಮಯ್ಯ ಆತನನ್ನು ಉಪಚರಿಸುವುದಕ್ಕೆ ಹೋಗಿದ್ದೇವು ಎಂದರೆ ಸರಿಯಲ್ಲ. ರಮೇಶನನ್ನು ಮನೆಗೆ ಕರೆದುಕೊಂಡು ಬಂದು ಸ್ನಾನ ಮಾಡಿಸಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸುಳ್ಳು. ಮೂರ್ಛೆ ರೋಗಕ್ಕೆ ಚಿಕಿತ್ಸೆ ಕೊಡಿಸಲು ರಮೇಶನನ್ನು ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ.

ರಮೇಶ ಮತ್ತು ರಾಮಯ್ಯ ಅಣ್ಣ ತಮ್ಮಂದಿರು ಆಗಿರುವ ಕಾರಣ ಕೊಲೆ ಮಾಡುವ ಉದ್ದೇಶ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಮತ್ತು ಮೃತ ರಮೇಶ ಚೆನ್ನಾಗಿಯೇ ಇದ್ದರು. ಪೊಲೀಸರ ಮುಂದೆ ನಾನು ಹೇಳಿಕೆ ಕೊಟ್ಟಿರುತ್ತೇನೆ. ದೊಣ್ಣೆ ಹನುಮಂತರಾಯಪ್ಪ ಮನೆ ಹಿಂದೆಗಡೆ ಇತ್ತು. ಘಟನೆ ನಡೆದ ಸ್ಥಳ ಹನುಮಂತರಾಯಪ್ಪ ರವರ ಮನೆ ಹತ್ತಿರನೇ ಇರುತ್ತದೆ. ಯಾವುದೇ ಘಟನೆ ನಡೆದಿರುವುದಿಲ್ಲ ಮತ್ತು ನಾನು ಕಣ್ಣಾರೆ ಯಾವುದೇ ಘಟನೆ ನೋಡಿರುವುದಿಲ್ಲ ಆ ದಿನ ನಾನು ಊರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಿನೇಶ್ , ಕಾಂತರಾಜು , ನಾಗರಾಜು ಪೊಲೀಸರ ಮುಂದೆ ಹೇಳಿಕೆ ಕೊಡಲು ನನಗೆ ಹೇಳಿದ್ದರಿಂದಲೇ ನಾನು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ನಿಜ.

ರಾಮಯ್ಯನ ಅಣ್ಣನ ಹೆಸರು ಹನುಮಂತರಾಯಪ್ಪ ಮತ್ತು ನಾಗರಾಜು. ನಾಗರಾಜು ರವರು ನಮ್ಮ ಊರಿನ ಗ್ರಾಮ ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸಿ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದರು ಎನ್ನುವುದು ನಿಜ. ಆ ಸಮಯದಲ್ಲಿ ದಿನೇಶ್, ರಮೇಶ್, ಲಕ್ಷ್ಮೀಕಾಂತ , ನಾಗರಾಜು ರವರ ವಿರುದ್ಧ ಚುನಾವಣೆಯಲ್ಲಿ ಕೆಲಸ ಮಾಡಿರುತ್ತಾರೆ ಎಂದರೆ ಸುಳ್ಳು. ರಮೇಶನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ಕಾರಿನ ನೊಂದಣಿ ನಂಬರ್ ಗೊತ್ತಿರುವುದಿಲ್ಲ. ಸದರಿ ಕಾರಿನಲ್ಲಿ ರಮೇಶನ ಜೊತೆ ದಿನೇಶ್ , ಲಕ್ಷ್ಮೀಕಾಂತ , ಪುಟ್ಟತಾಮಯ್ಯ ಮತ್ತು ನಾಗರಾಜು ಹೋಗಿರುತ್ತಾರೆ. ಚುನಾವಣೆಯಲ್ಲಿ ನಾಗರಾಜುವಿನ ವಿರುದ್ದ ದಿನೇಶ್ ರವರ ಗುಂಪು ಸೋತುಹೋಗಿರುತ್ತದೆ ಎಂದರೆ ನಿಜ. ಈ ಎಲ್ಲಾ ದ್ವೇಷದಿಂದ ನಾಗರಾಜು ಮತ್ತು ರಾಮಯ್ಯನನ್ನು ಮಟ್ಟಹಾಬೇಕೆಂದು ನಾನು ದಿನೇಶ್ ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಯಾವುದೇ ಉದ್ದೇಶಇಟ್ಟುಕೊಂಡು ರಮೇಶನನ್ನು ಹೊಡೆದಿಲ್ಲವಾದರೂ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**